ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

ಕರ್ನಾಟಕ ಸರಕಾರದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸಾಧಕರಿಗೆ
ಕೊಡ ಮಾಡುವ ಡಾ. ರಾಜಾರಾಮಣ್ಣ ಪ್ರಶಸ್ತಿಗೆ (2015–16)
ಭಾಜನರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ
ಪ್ರೊ. ಎಸ್.ಆರ್. ನಿರಂಜನ ಅವರಿಗೆ

# ಅಭಿನಂದನಾ ಸಮಾರಂಭ

17ನೇ ಏಪ್ರಿಲ್. 2017. ಸಮಯ 11.30ಕ್ಕೆ
**ಡಾ. ಬಿ.ಆರ್. ಅಂಬೇಡ್ಕರ್ ಭವನ**
ಗುಲಬರ್ಗಾ ವಿಶ್ವವಿದ್ಯಾಲಯ. ಕಲಬುರಗಿ

ಸರ್ವರಿಗೂ ಆದರದ ಸ್ವಾಗತ

**ಪ್ರೊ. ಲಕ್ಷ್ಮಣ ರಾಜನಾಳಕರ್**
ವಿತ್ತಾಧಿಕಾರಿಗಳು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**ಪ್ರೊ. ಸಿ.ಎಸ್. ಪಾಟೀಲ**
ಕುಲಸಚಿವರು (ಮೌ)
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**ಪ್ರೊ. ಆಗಸರ್ ದಯಾನಂದ**
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ



# ಅಭಿನಂದನಾ ಸಮಾರಂಭ

| | |
|---|---|
| ಮುಖ್ಯ ಅತಿಥಿಗಳು | **ನಾಡೋಜ ಡಾ. ಪಿ.ಎಸ್. ಶಂಕರ್**<br>ಎಮೆರಿಟಸ್, ಪ್ರೊಫೆಸರ್ ಆಫ್ ಮೆಡಿಸನ್<br>ಕಲಬುರಗಿ |
| ಸನ್ಮಾನಿತರು | **ಪ್ರೊ. ಎಸ್.ಆರ್. ನಿರಂಜನ**<br>ಕುಲಪತಿಗಳು<br>ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ |
| ಅಭಿನಂದನಾರ್ಪಿತರು | **ಸಿಂಡಿಕೇಟ ಸದಸ್ಯರು**<br>**ವಿದ್ಯಾವಿಷಯಕ ಪರಿಷತ್ ಸದಸ್ಯರು**<br>**ವಿದ್ಯಾರ್ಥಿಗಳು**<br>**ಶಿಕ್ಷಕರು**<br>**ಶಿಕ್ಷಕೇತರ ಸಿಬ್ಬಂದಿಗಳು** |

## ಸರ್ವರಿಗೂ ಆದರದ ಸ್ವಾಗತ

**ಪ್ರೊ. ಲಕ್ಷ್ಮಣ ರಾಜನಾಳಕರ್**
ವಿತ್ತಾಧಿಕಾರಿಗಳು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**ಪ್ರೊ. ಸಿ.ಎಸ್. ಪಾಟೀಲ**
ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**ಪ್ರೊ. ಅಗಸರ್ ದಯಾನಂದ**
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ



# ಅಭಿನಂದನಾ ಸಮಾರಂಭ

**ಪ್ರೊ. ಎಸ್.ಆರ್. ನಿರಂಜನ**
Ph.D., FNAAS., FNABS., FPSI., FISMPP.
ಕುಲಪತಿಗಳು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಸಸ್ಯಶಾಸ್ತ್ರ ಮತ್ತು ಜೈವಿಕ ವಿಜ್ಞಾನ ವಿಷಯದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಪ್ರೊ. ಎಸ್.ಆರ್. ನಿರಂಜನ ಅವರು ತಮ್ಮ ಸತತ ಪರಿಶ್ರಮ, ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಗಳ ಮೂಲಕ ವಿಜ್ಞಾನ ಕ್ಷೇತ್ರದಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಪ್ರೊ. ಎಸ್.ಆರ್. ನಿರಂಜನ ಅವರು ಕೇವಲ ವಿಜ್ಞಾನದ ಪ್ರಾಧ್ಯಾಪಕ ವೃತ್ತಿಯೊಂದಿಗೆ ಸಾಧನೆಯ ಶಿಖರವೇರಿದ ವರಲ್ಲ, ಒಳ್ಳೆಯ ಆಡಳಿತಗಾರರೂ, ಸಹೃದಯಿಗಳು ಆಗಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಯಾಗಿ ಎರಡು ವರ್ಷಗಳ ಆಡಳಿತದ ಅವಧಿಯಲ್ಲಿ ಅವರು ತೋರಿದ ಮುತುವರ್ಜಿ, ವಿಶ್ವವಿದ್ಯಾಲಯದ ಶ್ರೇಯೋಭಿವೃದ್ಧಿಗಾಗಿ, ಸದಾ ಕ್ರಿಯಾಶೀಲರಾಗಿ ಶ್ರಮಿಸಿದ ಕಾರಣಕ್ಕಾಗಿ ರಾಜ್ಯದ ಮೌಲ್ಯಾಂಕನ ಪಟ್ಟಿಯಲ್ಲಿ ಪ್ರಥಮ ಸ್ಥಾನ ಪಡೆದಿರುವುದು ಅವರ ದೃಢ ನಿಲುವಿನ ನಾಯಕತ್ವದ ಪ್ರತಿಫಲವೆಂದು ಹೆಮ್ಮೆಯಿಂದ ಹೇಳಬೇಕಾಗುತ್ತದೆ.

ಪ್ರೊ. ಎಸ್.ಆರ್. ನಿರಂಜನ ತಮ್ಮ ಬದುಕಿನ ದಾರಿಯನ್ನು ಕಡು ಕಷ್ಟದಿಂದ ಕ್ರಮಿಸಿದ್ದಾರೆ. ಅಲ್ಲದೆ ಜನಪರ ನೆಲೆಯ ಸಂವೇದನೆಯ ವ್ಯಕ್ತಿತ್ವ ಅವರದಾಗಿದೆ. ಅವರು ಚಿತ್ರದುರ್ಗ (ಜಿ/ತಾ) ಬಹದ್ದೂರ ಘಟ್ಟ ಗ್ರಾಮದ ಶ್ರೀ ರಾಮಚಂದ್ರಪ್ಪ ಹಾಗೂ ಶ್ರೀಮತಿ ರತ್ನಮ್ಮ ಅವರ ಮಗನಾಗಿ 20 ಜುಲೈ 1959ರಂದು ಜನಿಸಿದರು. ಇವರದು ಸಾಮಾನ್ಯ ಕೃಷಿ ಕುಟುಂಬ. ಇವರಿಗೆ ನಾಲ್ಕು ಜನ ಸಹೋದರಿಯರಲ್ಲದೆ ಒಬ್ಬ ತಮ್ಮನಿದ್ದಾನೆ. ಪ್ರೊ. ಎಸ್.ಆರ್. ನಿರಂಜನ ಅವರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಸ್ವಗ್ರಾಮ ಬಹದ್ದೂರಘಟ್ಟದಲ್ಲಿ ಪೂರೈಸಿದರೆ, ಕಾಲೇಜು ಶಿಕ್ಷಣವನ್ನು ಚಿತ್ರದುರ್ಗದ ಸರಕಾರಿ ವಿಜ್ಞಾನ ಮಹಾವಿದ್ಯಾಲಯದಲ್ಲಿ 1984ರಲ್ಲಿ ಪೂರೈಸಿದರು. 1986ರಲ್ಲಿ ಜೈವಿಕ ತಂತ್ರಜ್ಞಾನದಲ್ಲಿ ಎಂ.ಎಸ್ಸಿ. ಹಾಗೂ ಎಂ.ಫಿಲ್. ಪಿಎಚ್.ಡಿ. ಪದವಿಗಳನ್ನು ಮೈಸೂರು ವಿಶ್ವವಿದ್ಯಾಲಯದಿಂದಲೇ ಪಡೆದಿದ್ದಾರೆ.

ಅವರ ಸಂಶೋಧನ ಮಹಾಪ್ರಬಂಧವು ಜೈವಿಕ ತಂತ್ರಜ್ಞಾನ ವಿಷಯದಲ್ಲಿ ಮಹತ್ವ ಪೂರ್ಣವಾದ ಗ್ರಂಥವೆಂದು ಪ್ರಖ್ಯಾತಿ ಪಡೆದಿದೆ. ಅಲ್ಲದೆ ಅನೇಕ ಸಂಶೋಧಕರಿಗೆ ಮಾರ್ಗದರ್ಶಿ ಆಕರ ಗ್ರಂಥವಾಗಿ ಉಳಿದಿದೆ. ನಿರಂತರವಾದ ಅಧ್ಯಯನ ಸಂಶೋಧನೆಗೆ ತೊಡಗಿಸಿಕೊಂಡ ಪ್ರೊ. ನಿರಂಜನ ಅವರು ಡೆನ್ಮಾರ್ಕಿನ ಡ್ಯಾನಿಷ ಸರಕಾರಿ ರೋಗ ಲಕ್ಷಣ ಶಾಸ್ತ್ರ ಸಂಸ್ಥೆ (DGISP) ಪೋಸ್ಟ್ ಡಾಕ್ಟರ್ ಫೆಲೋ ಆಗಿ, ಸಂಶೋಧನ ಸಂಸ್ಥೆಯ ಸಂಯೋಜಕರಾಗಿ ವಿಶೇಷವಾದ ಪರಿಣಿತಿಯನ್ನು ಪಡೆದರು. ಆ ಮೂಲಕ ಭಾರತ ದೇಶದ ಕೀರ್ತಿಯನ್ನು ಹೆಚ್ಚಿಸಿದರು. ತಮ್ಮ ಮೂವತ್ತು ವರ್ಷಗಳ ವೃತ್ತಿಯ ಜೊತೆಗೆ ಮೈಸೂರು ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ ಶಿಸ್ತುಗಳಲ್ಲಿ ಶ್ರಮಿಸಿದ್ದಾರೆ. ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾಗಿ ಮಹತ್ವದ ಕೆಲಸ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಡ್ಯಾನಿಷ್ ಸೀಡ್ಸ್ ಹೆಲ್ತ್ ಸೆಂಟರ್ (DSHC) ಸಹಾಯದಿಂದ ಸ್ಥಾಪಿಸಿದ ಏಷಿಯನ್ ರೀಜನಲ್ ಸೆಂಟರ್‌ನ ಬೀಜ ಸ್ವಾಸ್ಥ್ಯ ತರಬೇತಿ ಮತ್ತು ಸಂಶೋಧನ ಸಂಸ್ಥೆಯ ಸಂಯೋಜಕರಾಗಿ ಅದರ ಮಹತ್ವವನ್ನು ಜಗತ್ತಿಗೆ ತೋರಿಸಿದರು. ಇದಕ್ಕೆ ಸಂಬಂಧಿಸಿದ ಸಂಪರ್ಕ ಜಾಲವನ್ನು ಬಾಂಗ್ಲಾ, ನೇಪಾಳ, ಚೀನಾ, ವಿಯೆಟ್ನಾಂ ಹಾಗೂ ಟ್ಯಾಂಜೆನಿಯಾ ದೇಶಗಳಲ್ಲಿ ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ತಮ್ಮ ಸಂಶೋಧನೆಯ ಒಡನಾಟವನ್ನು ವಿವಿಧ ದೇಶಗಳೊಂದಿಗೆ ವಿವಿಧ, ಯೋಜನೆಗಳ ಮೂಲಕ ಸಫಲಗೊಳಿಸಿದ್ದಾರೆ. ಜಗತ್ತಿನ 25 ದೇಶಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ, ವಿಜ್ಞಾನಿಯಾಗಿ ತಮ್ಮ ಪಾಂಡಿತ್ಯವನ್ನು ಪ್ರದರ್ಶನ ಮಾಡಿದ್ದಾರೆ. ಬೀಜ ವಿಜ್ಞಾನ ಮತ್ತು ತಂತ್ರಜ್ಞಾನದ ಚಕ್ರವರ್ತಿ ಎಂದು ಎಸ್ಸಾರೆನ್ ಅವರನ್ನು ಕರೆದರೆ ತಪ್ಪಾಗಲಾರದು. ಮೈಸೂರು ವಿಶ್ವವಿದ್ಯಾಲಯಕ್ಕೆ ವಿಶ್ವಮಟ್ಟದ ದರ್ಜೆ ಕಲ್ಪಿಸಿಕೊಡುವಲ್ಲಿ ಎಸ್ಸಾರೆನ್ ಶ್ರಮ ಪ್ರಮುಖ

# ಅಭಿನಂದನಾ ಸಮಾರಂಭ



ವಾದುದು. ಸುಮಾರು 150ಕ್ಕೂ ವಿದ್ವತ್ಪೂರ್ಣ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಜೈವಿಕ ವಿಜ್ಞಾನದ ಕುರಿತು ಕೃತಿ ರಚಿಸಿದ್ದಾರೆ. 80 ಅಂತರಾಷ್ಟ್ರೀಯ, 50 ರಾಷ್ಟ್ರಮಟ್ಟದ ಸಂಶೋಧನ ಲೇಖನಗಳು ಪ್ರಕಟಪಡಿಸಿದ್ದಾರೆ. 4 ನೆನಪಿನ ಸಂಚಿಕೆ, 7 ತಾಂತ್ರಿಕ ಲಘು ಪ್ರಕಟನೆಗಳು 6 ಹಸ್ತ ಪತ್ರಿಕೆಗಳು ಪ್ರಕಟಗೊಂಡಿವೆ. ಇವರು ಅನೇಕ ಸನದುಗಳನ್ನು ಪಡೆದಿದ್ದಾರೆ. 2 ಅಂತರಾಷ್ಟ್ರೀಯ, ಸನದುಗಳು, 2 ರಾಷ್ಟ್ರೀಯ ಸನದುಗಳು, 2 ಸನದು ಶೀಲ್ಡ್‌ಗಳನ್ನು, ಹೀಗೆ ಒಟ್ಟು ಆರು ಸನದುಗಳನ್ನು ಪಡೆದಿದ್ದಾರೆ.

ಪ್ರೊ. ಎಸ್.ಆರ್. ನಿರಂಜನ ಅವರು ತಾವೂ ಬೆಳೆದರಲ್ಲದೆ, ತಮ್ಮ ಸುತ್ತಮುತ್ತಲಿನ ಶೈಕ್ಷಣಿಕ ಪರಿಸರವನ್ನೂ ಬೆಳೆಸಿದ್ದಾರೆ. ತಮ್ಮ ಅಧೀನದ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿಯೂ ಶ್ರಮಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 20 ವಿದ್ಯಾರ್ಥಿಗಳು ಪಿಎಚ್.ಡಿ. 40 ಜನ ವಿದ್ಯಾರ್ಥಿಗಳು ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಇಂಡಿಯನ್ ಸೊಸೈಟಿ ಆಫ್ ಮೈಕಾಲಜಿ ಅಂಡ್ ಪ್ಲಾಂಟ್ ಪೆಥಾಲಜಿಯ ಅಧ್ಯಕ್ಷರಾಗಿ ಉದಯಪುರದಲ್ಲಿ ಅಂತರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿಯನ್ನು ಯಶಸ್ವಿಯಾಗಿ ನೆರವೇರಿಸಿದರು. ಅಂತರಾಷ್ಟ್ರೀಯ ಮಟ್ಟದ 11, ರಾಷ್ಟ್ರೀಯ ಮಟ್ಟದ 46 ಸಮ್ಮೇಳನಗಳಲ್ಲಿ ಭಾಗವಹಿಸಿ ಜೈವಿಕ ತಂತ್ರಜ್ಞಾನಕ್ಕೆ ಹಾಗೂ ರೈತರ ಬದುಕಿಗೆ ಅನುಕೂಲವಾಗುವ ವಿದ್ವತ್ಪೂರ್ಣ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಈ ಮೂಲಕ ವಿದ್ವಾಂಸರ, ಪಂಡಿತರ, ತಜ್ಞರುಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರೊ. ಎಸ್.ಆರ್. ನಿರಂಜನ ಅವರು ಎಂದೂ ಪ್ರಶಸ್ತಿ–ಗೌರವ–ಪುರಸ್ಕಾರಗಳ ಬೆನ್ನು ಹತ್ತಿದವರಲ್ಲ. ಅವುಗಳೇ ಇವರನ್ನು ಹುಡುಕಿಕೊಂಡು ಬಂದಿವೆ. ಅನೇಕ ಶೈಕ್ಷಣಿಕ ಹಾಗೂ ವೃತ್ತಿಪರ ಪ್ರತಿಷ್ಠಿತ ಸಂಸ್ಥೆಗಳು ಇವರಿಗೆ ಪ್ರಶಸ್ತಿ, ಗೌರವ ಹಾಗೂ ಫೆಲೋಶಿಪ್ ಗಳನ್ನು ನೀಡಿವೆ. ಈ ಪ್ರಶಸ್ತಿ ಗೌರವಗಳೆಲ್ಲವುಗಳು ಇವರ ಸಂಶೋಧನಾತ್ಮಕ, ಕರ್ತವ್ಯನಿಷ್ಠೆ ಹಾಗೂ ಪ್ರಾಮಾಣಿಕ ಸಾಧನೆಗೆ ಸಂದವುಗಳು.

ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಫೆಲೊ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ (FNAAS), ಫೆಲೊ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಬಯೊಲಾಜಿಕಲ್ ಸೈನ್ಸಸ್ (FNAAS), ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ರಿಕಗ್ನೇಷನ್ ಅವಾರ್ಡ್ (NAAS), ಸರ್ ಸಿ.ವಿ. ರಾಮನ್ ಸ್ಟೇಟ್ ಅವಾರ್ಡ್ ಆಫ್ ಯಂಗ್ ಸೈಂಟಿಸ್ಟ್, ಕರ್ನಾಟಕ ಸರಕಾರ, ಫೆಲೊ ಆಫ್ ಡೆನಿಶ್ ಇಂಟರ್ ನ್ಯಾಷನಲ್ ಡೆವಲಪ್ಮೆಂಟ್ ಏಜೆನ್ಸಿ (DANIDA) ಡೆನ್ಮಾರ್ಕ್, ಫೆಲೊ ಆಫ್ ಇಂಡಿಯನ್ ಸೊಸೈಟಿ ಆಫ್ ಮೈಕಾಲೊಜಿ ಅ್ಯಂಡ್ ಪ್ಲಾಂಟ್ ಪಥಾಲೊಜಿ (FISMPP) ಫೆಲೊ ಆಫ್ ಇಂಡಿಯನ್ ಪೈಟೊ ಪಥಾಲಾಜಿಕಲ್ ಸೊಸೈಟಿ (FPSI), ಎನ್. ಪ್ರಸಾದ ಮೆಮೋರಿಯಲ್ ಲೆಕ್ಚರ್ ಅವಾರ್ಡ್ (ISMPP), ಪಿ.ಭಿ.ಭಿಡೆ ಮೆಮೋರಿಯಲ್ ಅವಾರ್ಡ್, ಪಿ.ಪಿ. ಸಿಂಘಲ್ ಮೆಮೋರಿಯಲ್ ಅವಾರ್ಡ್ ಇವುಗಳೊಂದಿಗೆ 2015–16ರ ಸಾಲಿನ ಕರ್ನಾಟಕ ಸರಕಾರದ ಡಾ. ರಾಜಾರಾಮಣ್ಣ ಪ್ರಶಸ್ತಿಯು ಒಂದಾಗಿದೆ.



# ಅಭಿನಂದನಾ ಸಮಾರಂಭ

**PROF. S.R. NIRANJANA**
Ph.D., FNAAS., FNABS., FPSI., FISMPP
Vice Chancellor
**Gulbarga University, Kalaburagi, Karnataka, INDIA**

**Prof. S. R. Niranjana,** was born in Chitradurga district Bahadurghatta village. He has done his B.Sc at Government Science College, Chitradurga, M.Sc Botany, M.Phil in Seed Technology, Ph.D in Botany at University of Mysore, Mysore and Post Doctoral Fellow of Danish Government Institute of Seed Pathology (DGISP), Denmark.

**Prof. S. R. Niranjana** was the Chairman of Department of Studies in Biotechnology, University of Mysore, Mysore for two terms. He is working on various aspects of agriculture and sustainable development with his team of Research Scholars and Post-Doctoral Fellows from last two and half decades. **Prof. S. R. Niranjana visited Danish Government Institute of Seed Pathology (DGISP), Denmark under the Fellowship of Danish Government in 1998 to work as a Fellow at Institute of Seed Pathology, DGISP, Denmark under the well known Seed Pathologist, Dr. S. B. Mathur who received the prestigious FIS World Seed Prize in 1992.** After that he visited Denmark seven times in 1998, 2001, 2003, 2006, 2008, 2009 and 2013 to work for the transfer of Seed Pathology Courses, Diploma and Certificate Courses to the Department of Studies in Applied Botany, University of Mysore.

He is also instrumental in establishing the **Asian Seed Health Centre** by transferring the Seed Pathology Courses from Danish Government Institute of Seed Pathology (DGISP), Denmark to Department of Studies in Applied Botany, University of Mysore, Mysore for which Danish Government awarded **4.5 Crores grant** and established the network research and training centers in China Agriculture University, **China, Nepal, Vietnam, Bangladesh and Tanzania in South Africa** in the area of Molecular Plant Pathology, Seed Pathology, Biological Control, Host pathogen Interaction. And also visited other countries like **USA, Germany and Italy** as a Visiting Scientist with the financial support of Danish Government Institute of Seed Pathology (DGISP), Denmark.

**Prof. S. R. Niranjana** has guided 20 Ph.D and 40 M. Phil students, 2 students are working for Ph.D and 2 student for Post – Doctoral Fellow and he has published **154 research articles** in highly reputed international and national journals and published several technical bulletins and newsletters on plant health and its



# ಅಭಿನಂದನಾ ಸಮಾರಂಭ

management. He is having **four patents in his credits, two National and two International patents and two patents are filled** in the area of **Plant Biotechnology, Agriculture Biotechnology, Host pathogen interaction and Biological control.** He organized 10 national and international conferences and attended more than 100 national and international seminars, conferences and workshops and delivered about 25 lead lectures, more than 50 oral and posters presentations. He is the referee of several journals to edit the research articles.

**Prof. S. R. Niranjana** has created an excellent infrastructure at the University of Mysore, Mysore as Intuition of Excellence working as Co-ordinator – Monitoring – MHRD-IOE Project on Biodiversity, Bio-prospecting and Sustainable Development and also completed many national projects on various aspects of Agriculture from different funding agencies like DBT (03), DST (2), UGC (03), DANIDA and Advanta India Pvt. Ltd. **Presently he is collaborating very prestigious European Union (EU) Project on Seed Science and Technology in collaboration with Copenhagan University, Denmark, Tanzania and Burkina Faso for the "Development of seed treatment strategy of a medicinal plants for the enhancement of growth promotion in millet and sorghum grown in India and Africa" for which the EU is awarded 4 Crores grant.** With all these projects he has generated huge grant to the University of Mysore, Mysore.

**Prof. S.R. Niranjana is a recipient of several awards** to mention a few he got **Fellow of National Academy of Agricultural Sciences (FNAAS) – 2012, Fellow of National Academy of Biological Sciences (FNABS) – 2013, National Academy of Agricultural Sciences (NAAS) – Recognition Award – 2013-14, Sir. C.V. Raman State Award for Young Scientist – Govt. of Karnataka–2009, Fellow of Danish International Development Agency (DANIDA), Denmark–1998, Fellow of Indian Society of Mycology and Plant Pathology (FISMPP) – 2011-12, Fellow of Indian Phytopathological Society (FPSI) – 2016, N. Prasad Memorial Lecture Award (ISMPP) – 2016, V.P. Bhide memorial Award–2004 and P.P. Singhal Memorial Pesticide India Award–2007. Dr. Rajaramanna award: 2015-16 by Government of Karnataka.**